ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ಕೋಡಿ-ಕನ್ಯಾನದಲ್ಲಿ ಟಿ-ಜಟ್ಟಿ ನಿರ್ಮಾಣದ ಅಗತ್ಯತೆಯ ಬಗ್ಗೆ ಪೂರ್ವಭಾವಿ ಮಾಹಿತಿಗಳನ್ನು ಸ್ಥಳೀಯ ಪ್ರಾಧಿಕಾರಗಳಿಂದ ಸಂಗ್ರಹಿಸಲಾಗುತ್ತಿದೆ.

ಆ) ಮೇಲಿನ ಕಾರಣದಿಂದಾಗಿ, ಉದ್ಭವಿಸುವುದಿಲ್ಲ.

ಇ) ಮೇಲಿನ ಕಾರಣದಿಂದಾಗಿ, ಉದ್ಭವಿಸುವುದಿಲ್ಲ.

949(1531) ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಒಳನಾಡು ಮೀನುಗಾರರಿಗೆ ಸರ್ಕಾರ ವಾಸಿಸಲು ಮನೆ ಕಟ್ಟಿಕೊಡುತ್ತಿದೆಯೇ; ಹೌದಾದಲ್ಲಿ, ಕಳೆದ ಹಾಗೂ ಪ್ರಸ್ತುತ ಸಾಲಿನಲ್ಲಿ ಕಟ್ಟಿದ ಮನೆಗಳ ಸಂಖ್ಯೆ ಎಷ್ಟು (ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ;

ಆ) ಭದ್ರಾ ಹಿನ್ನೀರಿನಲ್ಲಿ ಇರುವ ಮೀನುಗಾರರ ಸಂಖ್ಯೆ ಎಷ್ಟು ;

ಇ) ಭದ್ರಾ ಹಿನ್ನೀರಿನಲ್ಲಿ ಎಷ್ಟು ಲಕ್ಷ ಮೀನು ಮರಿಗಳನ್ನು ಬಿಡಲಾಗಿದೆ?

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಹೌದು. ಚಿಕ್ಕಮಗಳೂರು ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಿಗೆ ಮತ್ಸ್ಯಾಶ್ರಯ ಮನೆಗಳು ಮಂಜೂರಾಗಿದ್ದು, ಮನೆಗಳ ನಿರ್ಮಾಣ ಕಾರ್ಯವನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ(ನಿ) ಇವರಿಗೆ ವಹಿಸಲಾಗಿದೆ.

ತಾಲ್ಲೂಕು	ಹಿಂದಿನ ಸಾಲು	ಪ್ರಸಕ್ತ ಸಾಲು
ಕಡೂರು	20	–
ತರೀಕೆರೆ	10	–

ಈ 30 ಮನೆಗಳ ಪೈಕಿ ಈವರೆಗೆ 21 ಫಲಾನುಭವಿಗಳನ್ನು ಅನುಮೋದಿಸಿದ್ದು ಒಂದು ಮನೆಯನ್ನು ನಿರ್ಮಿಸಲಾಗಿದೆ.

ಆ) ಭದ್ರಾ ಹಿನ್ನೀರಿನಲ್ಲಿ ಅಂದಾಜು 230 ಸಕ್ರಿಯ ಮೀನುಗಾರರಿರುತ್ತಾರೆ.

ಇ) 2001-02ನೇ ಸಾಲಿನಿಂದ ಇಲ್ಲಿಯವರೆಗೆ ಭದ್ರಾ ಹಿನ್ನೀರಿನಲ್ಲಿ 11.47 ಲಕ್ಷ ಮೀನುಮರಿಗಳನ್ನು ಬಿಡುಲಾಗಿದೆ.

950(1532) ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ) : ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶೃಂಗೇರಿ, ಕೊಪ್ಪ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಮರಳು ಹರಾಜು ನಡೆಸಲಾಗಿದೆಯೇ; ನಡೆಸಲಾಗದಿದ್ದಲ್ಲಿ ಕಾರಣಗಳೇನು ;

ಆ) ಈ ಮೂರು ತಾಲ್ಲೂಕುಗಳಲ್ಲಿ ಅಧಿಕೃತವಾಗಿ ಮರಳು ಗುತ್ತಿಗೆ ನೀಡಲು/ನೀಡುತ್ತಿರುವ ಸ್ಥಳಗಳು ಯಾವುವು;

ಇ) ಈ ತಾಲ್ಲೂಕುಗಳಲ್ಲಿ ಯಂತ್ರ ಉಪಯೋಗಿಸಿ ಮರಳನ್ನು ತೆಗೆಯಲು ಅನುಮತಿ ನೀಡಲಾಗಿದೆಯೇ ;

ಈ) ನೀಡಲಾಗಿದ್ದಲ್ಲಿ, ಯಾವ ಯಂತ್ರವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ;

ಉ) ಈ ತಾಲ್ಲೂಕುಗಳಲ್ಲಿ ನೀರಿನಿಂದ ಸಕ್ಷನ್(Suction) ಯಂತ್ರಗಳ ಮೂಲಕ ಮರಳು ತೆಗೆಯುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ;

ಊ) ಬಂದಿದ್ದಲ್ಲಿ, ಸರ್ಕಾರ ಇದನ್ನು ನಿಲ್ಲಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್(ಮುಖ್ಯ ಮಂತ್ರಿಗಳು) :

ಅ) ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳಲ್ಲಿ ಮಾತ್ರ ಪ್ರಸಕ್ತ ಸಾಲಿನಲ್ಲಿ ಮರಳು ಹರಾಜು ಪ್ರಕ್ರಿಯೆ ನಡೆಸಲಾಗಿದೆ. ಆದರೆ ನರಸಿಂಹರಾಜಪುರ ತಾಲ್ಲೂಕಿನಲ್ಲಿ ನೀರಿನ ಆಳ ಹೆಚ್ಚಿರುವುದರಿಂದ ಈ ಸಾಲಿನಲ್ಲಿ ಹರಾಜು ಪ್ರಕ್ರಿಯೆ ಮಾಡಲಾಗಿಲ್ಲ.

ಆ) (1) ಮರಳು ಹರಾಜು ಪ್ರಕ್ರಿಯೆ ಹೊರಡಿಸಿ ಹರಾಜು ಮಾಡಲಾದ ಮರಳು ಗುತ್ತಿಗೆಗಳು

ಶೃಂಗೇರಿ ತಾಲ್ಲೂಕು		ಕೊಪ್ಪ ತಾಲ್ಲೂಕು	
ಸ್ಥಳ	ಕ್ಷೇತ್ರ	ಸ್ಥಳ	ಕ್ಷೇತ್ರ
ಶೃಂಗೇರಿ	300	ನರಸೀಪುರ	100
ಹಾಲಂದೂರು ಮಸಿಗೆ	200	ನರಸೀಪುರ	200
ಅಡ್ಡಗದ್ದೆ I	100	ತಮ್ಮಡೆಗಳ್ಳಿ I	100
ಅಡ್ಡಗದ್ದೆ I	200	ತಮ್ಮಡಗಳ್ಳಿ II	300
		ತಮ್ಮಡಗಳ್ಳಿ III	200
		ಭುವನ ಕೋಟೆ	100
		ಹರಿಹರಪುರ I	300
		ಹರಿಹರಪುರ	300
		ಅದ್ದೂಡ	200
		ಬೊಮ್ಮಲಾಪುರ	200
		ಹರಿಹರಪುರ III	200

ಇ) ಇಲ್ಲ.

ಈ) ಯಾವುದೇ ಯಂತ್ರ ಉಪಯೋಗಿಸಿ ಮರಳು ತೆಗಯಲು ಅನುಮತಿ ನೀಡಿಲ್ಲ.

ಉ) ಬಂದಿದೆ

ಊ) ಯಂತ್ರ ಉಪಯೋಗಿಸಿ ಮರಳು ಎತ್ತುವ ಗುತ್ತಿಗೆದಾರರಿಗೆ ನೋಟೀಸು ಜಾರಿ ಮಾಡಿದ್ದು, ಈ ರೀತಿಯಾಗಿ ಯಂತ್ರಗಳನ್ನು ಉಪಯೋಗಿಸಿ ಮರಳು ತೆಗೆಯುವುದನ್ನು ನಿಲ್ಲಿಸಲಾಗಿದೆ.

952(1534) ಶ್ರೀ ಜೀವರಾಜ್ ಡಿ.ಎನ್.(ಶೃಂಗೇರಿ) : ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯುವ ಡಾಟ್ ಕಾಂ ಯೋಜನೆ ಜಾರಿಯಲ್ಲಿದೆಯೇ;

ಆ) ಈ ಯೋಜನೆಯಡಿ ಪ್ರಾರಂಭದಿಂದ ಈ ತನಕ ತರಬೇತಿ ನೀಡಲಾಗಿದೆ. (ವರ್ಷವಾರು, ತಾಲ್ಲೂಕುವಾರು, ಲಿಂಗವಾರು, ಪರಿಶಿಷ್ಟ ಜಾತಿ, ಪಂಗಡ, ಇತರೆ ಜಾತಿವಾರು ಮಾಹಿತಿ ನೀಡುವುದು;)

ಇ) ಈ ಯೋಜನೆಯಲ್ಲಿ ಭಾಗಿಯಾಗಿರುವ ಖಾಸಗಿ ಸಂಸ್ಥೆಗಳು ಯಾವುವು; ಈ ಸಂಸ್ಥೆಗಳನ್ನು ಯಾವ ಸೇವೆಗಳನ್ನು ಪಡೆಯಲು ಯಾವಾಗ ಭಾಗಿಯಾದವು;